**Kannadaprabha**

**Date:** December 6th, 2014 **Page No.** 02

**Edition:** Mysuru **Language:** Kannada

# ಮಾನವ ಸಂಪನ್ಮೂಲ ಸಮ್ಮೇಳನ ಆರಂಭ

## ಉದ್ಯಮಗಳ ಯಶಸ್ಸಿಗೆ ಸಾಮಾಜಿಕ ಸಂಪರ್ಕ ಅವಶ್ಯ

**ಮೈಸೂರು:** ಮಾನವ ಸಂಪನ್ಮೂಲ ನಿರ್ವಹಣೆ ಕುರಿತಾದ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಅಭಿವೃದ್ಧಿ ಸಂಸ್ಥೆಯಲ್ಲಿ ಶುಕ್ರವಾರ ಆರಂಭವಾಯಿತು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸಂಸ್ಥೆಯ ಆವರಣದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ ಕುರಿತ ಮೂರನೇ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಅಡ್ರಿನಲಿನ್ ಇ ಸಿಸ್ಟಮ್ಸ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವಾಮಿನಾಥನ್ ಸಂತಾನಂ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಭವಿಷ್ಯ ಆಧಾರಿತ ಉದ್ಯಮಗಳ ಯಶಸ್ಸಿಗೆ ಸಾಮಾಜಿಕ ಸಂಪರ್ಕ ಹಾಗೂ ಸಹಯೋಗ ಸಂಪರ್ಕಗಳು ಕಾರಣಗಳಾಗಲಿವೆ. ಈ ದಿಸೆಯಲ್ಲಿ ಜಾಲವ್ಯವಸ್ಥೆ ಪ್ರಮುಖ ಪಾತ್ರ ವಹಿಸಲಿದೆ ಎಂದು ಅಭಿಪ್ರಾಯಪಟ್ಟರು.

ಜಾಗತಿಕ ಮಟ್ಟದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆಯ ಸಮಸ್ಯೆ ಹಾಗೂ ಭಾರತದಲ್ಲಿನ ಮಾನವ ಸಂಪನ್ಮೂಲ ಬಳಕೆಯಲ್ಲಿನ ಅಸಮತೋಲನ ಮತ್ತು ಪ್ರಪಂಚಕ್ಕೆ ಮುಂದಿನ ದಿನಗಳಲ್ಲಿ ದೇಶದ ಮಾನವ ಸಂಪನ್ಮೂಲದ ಪ್ರಾಮುಖ್ಯತೆ ಅದಕ್ಕಾಗಿ ಯುವಸಮುದಾಯ ರೂಢಿಸಿಕೊಳ್ಳಬಹುದಾದ ಕೌಶಲವನ್ನು ವಿವರಿಸಿದರು.

ಸಮ್ಮೇಳನದ ಅಧ್ಯಕ್ಷೆ ಡಾ. ಮೌಸುಮಿ ಸೇನ್‌ಗುಪ್ತ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಡಾ. ನೀಲಂಜನ್ ಸೇನ್ ಗುಪ್ತ, ಸಂಸ್ಥೆಯ ಉಪನಿರ್ದೇಶಕಿ ಡಾ. ಎಚ್. ಗಾಯತ್ರಿ ಇದ್ದರು. ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್ ಸ್ವಾಗತಿಸಿದರು.




ಅಂತಾರಾಷ್ಟ್ರೀಯ ಸಮ್ಮೇಳನವನ್ನು ಅಡ್ರಿನಲಿನ್ ಇ ಸಿಸ್ಟಮ್ಸ್ ಸಿಇಒ ಸ್ವಾಮಿನಾಥನ್ ಸಂತಾನಂ ಉದ್ಘಾಟಿಸಿದರು.

- **ಭವಿಷ್ಯ ಆಧಾರಿತ ಉದ್ಯಮಗಳ ಯಶಸ್ಸಿಗೆ ಸಾಮಾಜಿಕ ಸಂಪರ್ಕ, ಸಹಯೋಗ ಸಂಪರ್ಕಗಳು ಕಾರಣಗಳಾಗಲಿವೆ. ಈ ದಿಸೆಯಲ್ಲಿ ಜಾಲ ವ್ಯವಸ್ಥೆ ಪ್ರಮುಖ ಪಾತ್ರ ವಹಿಸಲಿದೆ**

ನಂತರ ನಡೆದ ವಿಚಾರ ಸಂಕಿರಣದಲ್ಲಿ ವಿಪ್ರೋ ಬಿಪಿಒ ಜಿ.ಎಂ. ಪ್ರವೀಣ್ ಕಾಮತ್, ಜೆಎಸ್‌ಡಬ್ಲ್ಯು ಫೌಂಡೇಷನ್ ಸಿಸಿಎಸ್‌ಆರ್ ವಿಶ್ವನಾಥ್ ಪಲ್ಲದ್, ಪ್ರೋಬ್ ಇಕ್ವಿಟಿ ರಿಸರ್ಚ್‌ನ ಸಿಇಒ ಅತುಲ್ ಸಂಘಾಲ್ ಹಾಗೂ ಎಚ್‌ಆರ್ ಬಿಪಿ ಫ್ಲಿಪ್ ಕಾರ್ಡ್ ಕಾಂನ ನಿರ್ದೇಶಕ ಬಾಬು ವಿಠಲ್ ತಾಂತ್ರಿಕ ಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಈ ಎರಡು ದಿನಗಳ ಸಮ್ಮೇಳನದಲ್ಲಿ ಮಾನವ ಸಂಪನ್ಮೂಲ ನಿರ್ವಹಣೆಗೆ ಸಂಬಂಧಿಸಿದ ಮಾನವ ಬಂಡವಾಳ ನಿರ್ವಹಣೆ, ಜಾಗತಿಕ ಮಾನವ ಸಂಪನ್ಮೂಲ ನಿರ್ವಹಣೆ, ಮಾನವ ಸಂಪನ್ಮೂಲ ವಿಶ್ಲೇಷಣೆ, ಸಾಮರ್ಥ್ಯ ಅವಲೋಕನ, ಮಾನವ ಸಂಪನ್ಮೂಲ ಲೆಕ್ಕಾಚಾರ, ಮಾವನ ಸಂಪನ್ಮೂಲ ನೈತಿಕತೆ, ಕಾರ್ಯಕ್ಷೇತ್ರ ಮತ್ತು ವೈಯಕ್ತಿಕ ಜೀವನ ಸಮತೋಲನ, ಬದಲಾವಣೆ ನಿರ್ವಹಣೆ, ಪ್ರತಿಭಾ ನಿರ್ವಹಣೆ, ಉದ್ಯೋಗಿಗಳ ಆಯ್ಕೆ ಮುಂತಾದ ವಿಷಯಗಳ ಮೇಲೆ ಪರಿಣಿತರು ಪ್ರಬಂಧ ಮಂಡಿಸುವರು.

ಭಾರತ ಸೇರಿದಂತೆ ಬಾಂಗ್ಲಾದೇಶ, ಕೆಮರೂನ್, ಇಂಡೋನೇಷಿಯ, ಇರಾನ್, ನೇಪಾಳ್, ನೈಜಿರಿಯಾ ಹಾಗೂ ಅರಬ್ ಸೇರಿದಂತೆ ದೇಶ ವಿದೇಶಗಳ 200ಕ್ಕೂ ಹೆಚ್ಚಿನ ಶಿಕ್ಷಣ ತಜ್ಞರು ಹಾಗೂ ಮಾನವ ಸಂಪನ್ಮೂಲ ವೃತ್ತಿನಿರತರು ಭಾಗವಹಿಸಿದ್ದಾರೆ.